# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 267 |
| ಸದಸ್ಯರ ಹೆಸರು | : | ಶ್ರೀ ಲಹರ್ ಸಿಂಗ್ ಸಿರೋಯಾ |
| ಉತ್ತರಿಸುವ ದಿನಾಂಕ | : | 10.12.2018 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | 2018ರ ಜೂನ್ ನಂತರ ನಡೆದಿರುವ ರೈತರ ಆತ್ಮಹತ್ಯೆ ಪ್ರಕರಣಗಳು ಎಷ್ಟು; (ತಿಂಗಳವಾರು, ಜಿಲ್ಲಾವಾರು ಮಾಹಿತಿ ಒದಗಿಸುವುದು) | 2018ರ ಜೂನ್ ನಂತರ ಇಲ್ಲಿಯವರೆಗೆ ಒಟ್ಟು 283 ರೈತರ ಆತ್ಮಹತ್ಯೆ ಪ್ರಕರಣಗಳು ಜಿಲ್ಲೆಗಳಿಂದ ವರದಿಯಾಗಿದ್ದು ತಿಂಗಳವಾರು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ | ರೈತರ ಆತ್ಮಹತ್ಯೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ರೈತರ ಆತ್ಮಹತ್ಯೆಯನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಇ | ಸರ್ಕಾರವು ಘೋಷಿಸಿರುವ ರೈತರ ಸಾಲ ಮನ್ನಾ ಯೋಜನೆಯ ಲಾಭ ಈಗಾಗಲೇ ಎಷ್ಟು ರೈತರಿಗೆ ನೀಡಲಾಗಿದೆ? | ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ದಿನಾಂಕ 10-07-2018 ಕ್ಕೆ ಬೆಳೆ ಸಾಲ ಹೊರಬಾಕಿ ಹೊಂದಿರುವ 20.38 ಲಕ್ಷ ರೈತರಿಗೆ ರೂ.9448.61 ಕೋಟಿಗಳ ಲಾಭ ದೊರೆಯುವುದಾಗಿ ಅಂದಾಜಿಸಲಾಗಿದೆ.<br><br>ಸಾಲ ಮನ್ನಾ ಲಾಭವು ರೈತರು ಮರುಪಾವತಿಗೆ ನಿಗದಿಪಡಿಸಿದ ಗಡುವು ದಿನಾಂಕದಂದು (ದಿ.10-07-2018 ರಿಂದ ದಿ.10-07-2019) ದೊರೆಯುತ್ತದೆ.<br><br>ನವೆಂಬರ್ 2018ರ ವರೆಗೆ ಸಾಲ ಮರುಪಾವತಿಸಲು ಗಡುವು ~~ಬರುವ~~ ಸುಮಾರು 3.00 ಲಕ್ಷ ರೈತರಿಗೆ ರೂ.1322.13 ಕೋಟಿಗಳ ಸಾಲ ಮನ್ನಾ ಆಗುವುದಾಗಿ ಅಂದಾಜಿಸಿ, ಸರ್ಕಾರದಿಂದ ದಿನಾಂಕ 30-09-2018 ರಂದು ರೂ.800.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಕಂದಾಯ ಇಲಾಖೆಯಿಂದ ಅಭಿವೃಧಿಪಡಿಸಿದ ತಂತ್ರಾಂಶದಲ್ಲಿ ರೈತರ ಮಾಹಿತಿಯನ್ನು ಅಳವಡಿಸಲಾಗುತ್ತಿದ್ದು, ಸರ್ಕಾರದ ಆದೇಶದ ಷರತ್ತುಗಳನ್ವಯ ಅರ್ಹ ರೈತರನ್ನು ಗುರುತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |

ಸಂಖ್ಯೆ: ಕೃಇ 131 ಕೃಇಕ 2018

(ಎನ್.ಹೆಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು

ಅನುಬಂಧ- 1

2018ರ ಜೂನ್ ನಂತರ ನಡೆದಿರುವ ರೈತರ ಆತ್ಮಹತ್ಯೆ ಪ್ರಕರಣಗಳ ಜಿಲ್ಲಾವಾರು ವಿವರಗಳು

| ಕ್ರಸಂ | ಜಿಲ್ಲೆ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಒಟ್ಟು ವರದಿಯಾದ ಪ್ರಕರಣಗಳು | ಅರ್ಹ ಪ್ರಕರಣಗಳು | ಪರಿಹಾರ ನೀಡಿರುವ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಬಾಕಿ ಇರುವ ಪ್ರಕರಣಗಳು | ಎಫ್ ಎಸ್ ಎಲ್ ವರದಿಗಾಗಿ ಬಾಕಿ | ಇತರ ದಾಖಲಾತಿಗಳಿಗಾಗಿ ಬಾಕಿ |
|---|---|---|---|---|---|---|---|---|---|---|---|---|---|---|
| 1 | ಬಾಗಲಕೋಟೆ | 2 | 6 | 2 | 2 | 0 | 0 | 12 | 9 | 9 | 2 | 1 | 1 | 0 |
| 2 | ಬೆಳಗಾವಿ | 11 | 4 | 7 | 7 | 4 | 0 | 33 | 22 | 21 | 6 | 5 | 4 | 1 |
| 3 | ಬಳ್ಳಾರಿ | 0 | 2 | 1 | 0 | 2 | 0 | 5 | 3 | 3 | 0 | 2 | 2 | 0 |
| 4 | ಬೆಂ. ಗ್ರಾಮಾಂತರ | 1 | 1 | 1 | 0 | 0 | 0 | 3 | 1 | 1 | 1 | 1 | 1 | 0 |
| 5 | ಬೆಂ. ನಗರ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 6 | ಬೀದರ್ | 8 | 6 | 2 | 0 | 0 | 0 | 16 | 12 | 12 | 2 | 2 | 0 | 2 |
| 7 | ಚಾಮರಾಜನಗರ | 1 | 0 | 2 | 0 | 1 | 0 | 4 | 3 | 3 | 0 | 1 | 0 | 1 |
| 8 | ಚಿಕ್ಕಬಳ್ಳಾಪುರ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 9 | ಚಿಕ್ಕಮಗಳೂರು | 8 | 3 | 2 | 0 | 0 | 0 | 13 | 7 | 5 | 4 | 2 | 0 | 2 |
| 10 | ಚಿತ್ರದುರ್ಗ | 1 | 3 | 2 | 0 | 0 | 0 | 6 | 4 | 4 | 2 | 0 | 0 | 0 |
| 11 | ದಾವಣಗೆರೆ | 1 | 0 | 6 | 4 | 3 | 0 | 14 | 8 | 8 | 3 | 3 | 2 | 1 |
| 12 | ಧಾರವಾಡ | 2 | 2 | 3 | 6 | 2 | 0 | 15 | 6 | 5 | 7 | 2 | 2 | 0 |
| 13 | ದಕ್ಷಿಣ ಕನ್ನಡ | 0 | 1 | 0 | 0 | 1 | 0 | 2 | 0 | 0 | 1 | 1 | 1 | 0 |
| 14 | ಗದಗ | 4 | 1 | 3 | 2 | 2 | 0 | 12 | 5 | 5 | 4 | 3 | 3 | 0 |
| 15 | ಹಾಸನ | 3 | 2 | 0 | 1 | 0 | 0 | 6 | 2 | 2 | 3 | 1 | 0 | 1 |
| 16 | ಹಾವೇರಿ | 3 | 0 | 0 | 0 | 0 | 1 | 4 | 1 | 1 | 1 | 2 | 0 | 2 |
| 17 | ಕಲಬುರಗಿ | 6 | 6 | 3 | 2 | 1 | 0 | 18 | 12 | 12 | 0 | 6 | 1 | 5 |
| 18 | ಕೊಡಗು | 0 | 0 | 1 | 1 | 0 | 0 | 2 | 0 | 0 | 0 | 2 | 0 | 2 |
| 19 | ಕೋಲಾರ | 3 | 0 | 0 | 0 | 0 | 0 | 3 | 3 | 3 | 0 | 0 | 0 | 0 |
| 20 | ಕೊಪ್ಪಳ | 2 | 1 | 5 | 2 | 1 | 0 | 11 | 10 | 10 | 0 | 1 | 0 | 1 |
| 21 | ಮಂಡ್ಯ | 3 | 3 | 6 | 1 | 0 | 0 | 13 | 6 | 3 | 3 | 4 | 3 | 1 |
| 22 | ಮೈಸೂರು | 6 | 3 | 4 | 1 | 4 | 0 | 18 | 4 | 0 | 4 | 10 | 6 | 4 |
| 23 | ರಾಯಚೂರು | 4 | 1 | 1 | 0 | 1 | 0 | 7 | 6 | 6 | 0 | 1 | 0 | 1 |
| 24 | ರಾಮನಗರ | 1 | 1 | 0 | 3 | 1 | 0 | 6 | 2 | 2 | 0 | 4 | 1 | 3 |
| 25 | ಶಿವಮೊಗ್ಗ | 0 | 2 | 2 | 2 | 0 | 0 | 6 | 2 | 2 | 2 | 2 | 2 | 0 |
| 26 | ತುಮಕೂರು | 1 | 3 | 3 | 1 | 2 | 0 | 10 | 4 | 4 | 0 | 6 | 2 | 4 |
| 27 | ಉಡುಪಿ | 0 | 1 | 0 | 0 | 0 | 0 | 1 | 1 | 1 | 0 | 0 | 0 | 0 |
| 28 | ಉ.ಕನ್ನಡ | 1 | 1 | 1 | 0 | 0 | 0 | 3 | 1 | 0 | 1 | 1 | 0 | 1 |
| 29 | ವಿಜಯಪುರ | 7 | 4 | 2 | 5 | 2 | 0 | 20 | 12 | 7 | 0 | 8 | 4 | 4 |
| 30 | ಯಾದಗಿರಿ | 1 | 4 | 8 | 4 | 3 | 0 | 20 | 8 | 7 | 2 | 10 | 10 | 0 |
| | ಒಟ್ಟು | **80** | **61** | **67** | **44** | **30** | **1** | **283** | **154** | **136** | **48** | **81** | **45** | **36** |

ಕೃಷಿ ನಿರ್ದೇಶಕರು

LCQ-267

# ಅನುಬಂಧ -2

## ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳು

ರೈತರ ಆತ್ಮಹತ್ಯೆ ಕುರಿತು ಅಧ್ಯಯನ ನಡೆಸಲು ಸರ್ಕಾರವು 2001 ರಲ್ಲಿ ಡಾ. ಜಿ.ಕೆ. ವೀರೇಶ್, ನಿವೃತ್ತ ಕುಲಪತಿಗಳು, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ರೈತರ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಮತ್ತು ಸಾಂಸಾರಿಕ ಸಮಸ್ಯೆಗಳು, ಸಾಮರ್ಥ್ಯಕ್ಕೆ ಮೀರಿ ಸಾಲ, ಬೆಳೆ ನಷ್ಟ ಇವೇ ಮುಂತಾದವು ರೈತರ ಆತ್ಮಹತ್ಯೆಗೆ ಕಾರಣಗಳಾಗಿರುತ್ತವೆಂದು ವರದಿ ನೀಡಿರುತ್ತದೆ.

ರೈತರ ಆತ್ಮಹತ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ರೈತರ ಶ್ರೇಯೋಭಿವೃದ್ಧಿಗಾಗಿ ಮತ್ತು ಅವರಲ್ಲಿ ಆತ್ಮಸ್ಥೈರ್ಯ ತುಂಬಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ್ಯೂ ಸಹ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ರೈತರ ಆತ್ಮಹತ್ಯೆ ತಡೆಯಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

- ಸ್ಥಳೀಯ ಸಾಲಗಾರರಿಂದ ರೈತರ ಶೋಷಣೆ ತಡೆಯುವ ಕುರಿತು ಉಸ್ತುವಾರಿ / ನಿಗಾ ವಹಿಸಲು ಜಿಲ್ಲಾ ಮಟ್ಟದಲ್ಲಿ ಮತ್ತು ಉಪವಿಭಾಗ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ಈ ಜಿಲ್ಲಾ ಮಟ್ಟದ / ಉಪವಿಭಾಗ ಮಟ್ಟದ ಸಮಿತಿಯಲ್ಲಿ ಕಂದಾಯ, ಪೋಲೀಸ್, ಕೃಷಿ, ತೋಟಗಾರಿಕೆ, ಸಹಕಾರ, ಪಶುಸಂಗೋಪನೆ ಇಲಾಖೆಯ ಅಧಿಕಾರಿಗಳು ಸದಸ್ಯರಿದ್ದು, ದುಬಾರಿ ಬಡ್ಡಿಯಿಂದ ಬಾಧಿತರಾದ ರೈತರನ್ನು ರಕ್ಷಿಸಲು ಕ್ರಮ ವಹಿಸಲಾಗಿದೆ.
- ರಾಜ್ಯದ ರೈತರು ಸಹಕಾರ ಸಂಘಗಳ ಮೂಲಕ ಅಲ್ಪಾವಧಿ ಬೆಳೆ ಸಾಲ ಪಡೆದು ದಿ.20-6-2017 ಕ್ಕೆ ಬಾಕಿ ಇರುವ ಮೊತ್ತದಲ್ಲಿ ಅಸಲು ಮತ್ತು ಬಡ್ಡಿ ಸೇರಿ ರೂ.50000/- ಗಳ ಸಾಲ ಮನ್ನಾ ಮಾಡಲಾಗಿದೆ. ಇತ್ತೀಚೆಗೆ ರೂ.100000/- ಗಳವರೆಗೆ ಬೆಳೆ ಸಾಲ ಮನ್ನಾ ಮಾಡಲು ಸರ್ಕಾರವು ಆದೇಶ ಹೊರಡಿಸಿದೆ. ಹಾಗೂ ಡಿಸೆಂಬರ್-2017ರ ಅಂತ್ಯದವರೆಗೆ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಕಮರ್ಷಿಯಲ್ ಬ್ಯಾಂಕ್‌ನಲ್ಲಿನ ಸುಸ್ತಿ ಸಾದಲ ಪೈಕಿ ಗರಿಷ್ಠ ರೂ.2.00 ಲಕ್ಷದವರೆಗಿನ ಸಾಲ ಮನ್ನಾ ಮಾಡಲು ಸರ್ಕಾರ ಆದೇಶ ಹೊರಡಿಸಿದೆ.
- ಬೆಳೆ ವಿಮೆ:- ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತರಲಾಗಿದೆ. ವಿಮಾ ಕಂತಿನ ಶೇ. 95ರಿಂದ 98ರಷ್ಟು ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಪಾವತಿಸಲಾಗುತ್ತಿದೆ. ಇದರಿಂದಾಗಿ ಬೆಳೆನಷ್ಟ ಸಂಭವಿಸಿದರೂ ಸಹ ರೈತರಿಗೆ ಪರಿಹಾರ ದೊರೆಯುತ್ತದೆ.
- ಪ್ರಾಕೃತಿಕ ವಿಕೋಪಗಳಿಂದ ಬೆಳೆಹಾನಿ ಸಂಭವಿಸಿದಲ್ಲಿ, ರಾಷ್ಟ್ರ ಹಾಗೂ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೈತರಿಗೆ ಪರಿಹಾರ ನೀಡಲಾಗುತ್ತಿದೆ.
- ಕೃಷಿ ಆವರ್ತ ನಿಧಿ: ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಬೆಲೆ ಕುಸಿತವಾದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಆವರ್ತ ನಿಧಿಯನ್ನು ನಿರ್ವಹಿಸಲಾಗುತ್ತಿದೆ.
- ಬೆಲೆ ಕುಸಿತ ಸಂಧರ್ಭದಲ್ಲಿ ಕೇಂದ್ರ ಸರ್ಕಾರವು ನೀಡುವ ಕನಿಷ್ಠ ಬೆಂಬಲ ಬೆಲೆ ಜೊತೆಗೆ ರಾಜ್ಯ ಸರ್ಕಾರವು ಪ್ರೋತ್ಸಾಹಧನವನ್ನು ಒದಗಿಸಿ ರೈತರಿಂದ, ಉತ್ಪನ್ನಗಳನ್ನು ಖರೀದಿ ಮಾಡುತ್ತಿದೆ. 2016-17 ಮತ್ತು 2017-18ನೇ ಸಾಲಿನಲ್ಲಿ ಕ್ರಮವಾಗಿ ಕೊಬ್ಬರಿ & ತೊಗರಿ ಬೆಳೆಗೆ ಮತ್ತು ರಾಗಿ & ಜೋಳದ ಬೆಳೆಗೆ ಸರ್ಕಾರವು ಕೇಂದ್ರ ಸರ್ಕಾರದ ಬೆಂಬಲ ಬೆಲೆಯ ಜೊತೆಗೆ ರಾಜ್ಯ ಸರ್ಕಾರದ ಪ್ರೋತ್ಸಾಹಧನವನ್ನು ನೀಡಿ ಖರೀದಿಸಲಾಗುತ್ತಿದೆ.
- ರೈತರಿಗೆ ನೇರವಾಗಿ ಸಹಕಾರ ಸಂಘಗಳಿಂದ ಸಾಲದ ನೆರವು: ಶೂನ್ಯ ಬಡ್ಡಿಯಲ್ಲಿ ರೂ. 3.00 ಲಕ್ಷದವರೆಗೆ ಮತ್ತು ಶೇ. 3ರ ಬಡ್ಡಿಯಲ್ಲಿ ರೂ. 10.00 ಲಕ್ಷದವರೆಗೆ ರೈತರಿಗೆ ಸಾಲ ನೀಡುವ ಕ್ರಮವನ್ನು ರಾಜ್ಯ ಸರ್ಕಾರವು 2014-15ನೇ ಸಾಲಿನಿಂದ ಕೈಗೊಂಡಿರುತ್ತದೆ.
- ರಾಜ್ಯದಲ್ಲಿ 2009-10ನೇ ಸಾಲಿನಿಂದ ಬೆಳೆ ಸಾಲಕ್ಕೆ ಸಹಾಯಧನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2012-13ನೇ ಸಾಲಿನಿಂದ ಶೇ.1ರ ಬಡ್ಡಿ ರಿಯಾಯಿತಿ ಮಿತಿಯನ್ನು ರೂ. 50,000/- ದಿಂದ ರೂ. 1,00,000/-ದವರೆಗೆ ಹೆಚ್ಚಿಸಲಾಗಿರುತ್ತದೆ.
- ರಾಜ್ಯದಲ್ಲಿ ಮಳೆಯಾಶ್ರಿತ ರೈತ ಸಮುದಾಯದ ಜೀವನೋಪಾಯವನ್ನು ಉತ್ತಮಪಡಿಸಲು ಕೃಷಿ ಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಮಳೆ ನೀರಿನ ಸಂಗ್ರಹಣೆ, ಸಂರಕ್ಷಣೆ ಹಾಗೂ ಉಪಯುಕ್ತ ಬಳಕೆ, ಲಾಭದಾಯಕ ಬೆಳೆ ಪದ್ಧತಿ ಅಳವಡಿಕೆ, ಉತ್ತಮ ಆದಾಯ ತರುವ ತೋಟಗಾರಿಕೆ ಬೆಳೆಗಳು, ಪಶು ಸಂಗೋಪನಾ ಚಟುವಟಿಕೆಗಳು, ಕೃಷಿ ವಲಯಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಲಾಗಿದೆ. ಕೃಷಿ ಭಾಗ್ಯ ಯೋಜನೆಯನ್ನು ಅಭಿಯಾನ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

- ರಾಜ್ಯದಲ್ಲಿ ರೈತರ ಆದಾಯ ಹೆಚ್ಚಿಸುವ ಮತ್ತು ಆದಾಯದಲ್ಲಿ ಸ್ಥಿರತೆ ಹೆಚ್ಚಿಸಲು ಸಮಗ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡು ಅವರ ಜೀವನಮಟ್ಟವನ್ನು ಸುಧಾರಿಸುವ ಸಲುವಾಗಿ ಭೂಸಮೃದ್ಧಿ ಮುಂತಾದ ಯೋಜನೆಗಳ ಮೂಲಕ ಸಮಗ್ರ ಬೇಸಾಯ ಪದ್ಧತಿಯನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ(ನರೇಗಾ) ಒಗ್ಗೂಡಿಸುವಿಕೆಯೊಂದಿಗೆ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಕೃಷಿ, ಪಶುಸಂಗೋಪನೆ ಇಲಾಖೆಗಳು ಸಕ್ರೀಯವಾಗಿ ಪಾಲ್ಗೊಳ್ಳುವಿಕೆ ಮೂಲಕ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಸಕಾಲದಲ್ಲಿ ಕೃಷಿ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಸರ್ಕಾರದಿಂದ ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಉಪಕರಣದ ಕನಿಷ್ಟ ದರದ ಶೇ.50 ರಷ್ಟು ರಿಯಾಯಿತಿ ಮತ್ತು ಪ.ಜಾ/ಪ.ಪಂ ವರ್ಗದ ರೈತರಿಗೆ ಶೇ.90 ರಷ್ಟು, ಗರಿಷ್ಠ ಮಿತಿ ರೂ. 1.00 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ. ಸಣ್ಣ ಟ್ರ್ಯಾಕ್ಟರ್‌ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.75,000/- ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ರೂ.2.00ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ.
- ರೈತರಿಗೆ ಸಕಾಲದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಸಲುವಾಗಿ ಪ್ರತಿ ಹೋಬಳಿ ಕೇಂದ್ರದಲ್ಲಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ನೊಂದಾಯಿತ ಚಾರಿಟಬಲ್ ಟ್ರಸ್ಟಗಳು/ ಸಂಘ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ ಉತ್ತೇಜಿಸಿ ಯುವ ರೈತರನ್ನು ಕೃಷಿಯತ್ತ ಗಮನ ಸೆಳೆದು ಉದ್ಯೋಗಾವಕಾಶ ಸೃಜಿಸಲು ಹಾಗೂ ಸ್ಥಳೀಯವಾಗಿ ಕೃಷಿ ಉಪಕರಣಗಳ ದುರಸ್ತಿಗಾಗಿ ಹಾಗೂ ಲಘು ಉಪಕರಣಗಳ ತಯಾರಿಕೆಗಾಗಿ "ಗ್ರಾಮೀಣ ಕೃಷಿ ಯಂತ್ರೋಪಕರಣ ದುರಸ್ತಿ ಸೇವಾ ಕೇಂದ್ರ ಸ್ಥಾಪನೆ ಮಾಡಲಾಗುತ್ತಿದೆ.
- ಕೃಷಿ ಮತ್ತು ಎಲ್ಲಾ ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ರೈತರಿಗೆ ಅರಿವು ಮೂಡಿಸಲು ಹಾಗೂ ತಾಂತ್ರಿಕತೆಗಳನ್ನು ವರ್ಗಾಯಿಸಲು ಒಂದು ಏಕ ಗವಾಕ್ಷಿ ವ್ಯವಸ್ಥೆಯಾಗಿ ಕೃಷಿ ಅಭಿಯಾನ ಯೋಜನೆಯನ್ನು ಮುಂಗಾರು 2015 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- ರಾಜ್ಯಾದ್ಯಂತ ಕೃಷಿ ಚಟುವಟಿಕೆಗಳಿಗೆ ಸಹಾಯವಾಗುವಂತೆ ಸೂಕ್ಷ್ಮ ನೀರಾವರಿ ಘಟಕಗಳನ್ನು ಕಡಿಮೆ ವೆಚ್ಚದಲ್ಲಿ ಎಲ್ಲಾ ವರ್ಗದ ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿಸಣ್ಣ ರೈತರು ಶಕ್ತ ವೆಚ್ಚದಲ್ಲಿ ಪಡೆಯುವಂತೆ ಮಾಡಲು ಲಭ್ಯವಿರುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಮತ್ತು ಹೆಚ್ಚಿನ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಗಳಿಸಲು ರೈತರಿಗೆ ಹನಿ ನೀರಾವರಿ, ತುಂತುರು ನೀರಾವರಿ/ರೇನ್ ಗನ್ ಘಟಕಗಳ ಶೇ.90 ರಷ್ಟು ರಿಯಾಯಿತಿಯಲ್ಲಿ ವಿತರಣೆ ಮಾಡಲಾಗುತ್ತಿದೆ.
- ಸಾವಯವ ಕೃಷಿ ಉತ್ತೇಜಿಸಲು ರಾಜ್ಯ ಸರ್ಕಾರವು 2004-05ರಿಂದ ಸಾವಯವ ಕೃಷಿ ನೀತಿಯನ್ನು ಜಾರಿಗೆ ತಂದಿರುತ್ತದೆ. ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸಲು ಹಾಗೂ ವ್ಯವಸ್ಥಿತ ಮಾರುಕಟ್ಟೆ ಅಭಿವೃದ್ಧಿ ಕಾರ್ಯಕ್ರಮಗಳನ್ನೊಳಗೊಂಡ ಸಾವಯವ ಭಾಗ್ಯ ಯೋಜನೆಯನ್ನು 2013-14ನೇ ಸಾಲಿನಿಂದ ಜಾರಿಗೆ ತರಲಾಗಿದೆ. ಇದಕ್ಕೆ ಪೂರಕವಾಗಿ, ರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಕೃಷಿ ಇಲಾಖೆ ವತಿಯಿಂದ ಆಯೋಜಿಸಲಾಗಿರುತ್ತದೆ. ಜನವರಿ 2018ರ ಮಾಹೆಯಲ್ಲಿ ಅಂತರ ರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯಗಳ ವಾಣಿಜ್ಯ ಮೇಳವನ್ನು ಏರ್ಪಡಿಸಲಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ರೈತರು ಭಾಗವಹಿಸಿದ್ದು ಮುಖ್ಯವಾಗಿ ಕಿರುಧಾನ್ಯಗಳ ಮಹತ್ವದ ಬಗ್ಗೆ, ಸಂಸ್ಕರಣೆ, ಮಾರುಕಟ್ಟೆ ಇತ್ಯಾದಿಗಳ ಬಗ್ಗೆ ಪೂರಕವಾಗಿ ಮಾಹಿತಿಯನ್ನು ನೀಡಲಾಗಿದೆ.